ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 17/05/2019

### ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಇಲ್ಲದ ಜಾತಿಗಳಿಗೆ ಪ್ರಮಾಣಪತ್ರ ನೀಡಲು ನಿರ್ಧಾರ

# ಮೇಲ್ವರ್ಗ ಮೀಸಲು: ರಾಜ್ಯದ 144 ಜಾತಿಗಳಿಗೆ ಪ್ರಯೋಜನ

■ **ಜಯಂತ್ ಗಂಗವಾಡಿ** ಬೆಂಗಳೂರು

'ಮೇಲ್ವರ್ಗದ ಆರ್ಥಿಕ ಹಿಂದುಳಿದ'ವರಿಗೆ ಶೇ.10 ಮೀಸಲು ಕಲ್ಪಿಸುವ ಕೇಂದ್ರ ಸರಕಾರದ ಹೊಸ ಕಾಯಿದೆಯಿಂದಾಗಿ ರಾಜ್ಯದ 144 ಜಾತಿ-ಉಪಜಾತಿ, ಧರ್ಮೀಯರಿಗೆ ಪ್ರಯೋಜನ ಸಿಗಲಿದೆ. ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಇಲ್ಲದ ನೂರಾರು ಜಾತಿಗಳ ಲಕ್ಷಾಂತರ ಜನರಿಗೆ ಮೀಸಲು ಸೌಲಭ್ಯ ದೊರೆಯಲಿದೆ.

ಇದರೊಂದಿಗೆ ರಾಜ್ಯದಲ್ಲಿರುವ ಬ್ರಾಹ್ಮಣರು, ಆರ್ಯವೈಶ್ಯರು, ಜೈನರು, ನಾಯರ್‌ಗಳು ಹಾಗೂ ಮೊದಲಿಯಾರ್ ಸಮುದಾಯದವರ ಜತೆ ವೀರಶೈವ-ಲಿಂಗಾಯತರು, ಒಕ್ಕಲಿಗ ಸೇರಿದಂತೆ 139 ಜಾತಿ, ಉಪಜಾತಿ, ಧರ್ಮೀಯರೂ ಕೇಂದ್ರದ ಮೀಸಲಿಗೆ ಅರ್ಹರಾಗಲಿದ್ದಾರೆ.

ಈ ನಡುವೆ, ಕೇಂದ್ರ ಸರಕಾರದ ನಾಗರಿಕ ಹುದ್ದೆಗಳು, ಸೇವೆಗಳಲ್ಲಿ ನೇರ ನೇಮಕ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಡಬ್ಲ್ಯುಎಸ್) ಅರ್ಹ ಅಭ್ಯರ್ಥಿಗಳಿಗೆ 'ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರ'(ಇನ್‌ಕಮ್ ಆ್ಯಂಡ್ ಅಸೆಟ್ ಸರ್ಟಿಫಿಕೇಟ್) ವಿತರಣೆ ಮಾಡಲು ಅನುಮತಿ ನೀಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಸರಕಾರದ ಆದೇಶದ ಅನುಸಾರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಕೇಂದ್ರ ಸರಕಾರದ ಒಬಿಸಿ ಮೀಸಲು ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಜಾತಿಗಳನ್ನು ಹೊರತುಪಡಿಸಿ ಇತರ ಜಾತಿಗಳು ಮೀಸಲು ಸೌಲಭ್ಯಕ್ಕೆ ಅರ್ಹವಾಗುತ್ತವೆ. »11




### ಪ್ರಮಾಣಪತ್ರಕ್ಕೆ ನಿಬಂಧನೆಗಳೇನು?

ಆದಾಯ ಮತ್ತು ಸ್ವತ್ತು ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸುವ ಅರ್ಜಿದಾರರು ತಮ್ಮ ಪ್ಯಾನ್ ಕಾರ್ಡ್, ಫಾರಂ-16, ಆದಾಯ ತೆರಿಗೆ ಪಾವತಿಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ, ಈ ದಾಖಲೆಗಳು ತಮ್ಮ ಬಳಿ ಲಭ್ಯವಿಲ್ಲವೆಂದು ನೋಟರಿಯಿಂದ ದೃಢೀಕರಿಸಿದ ಅಫಿಡವಿಟ್ ಸಲ್ಲಿಸಬೇಕು.

14.04.2019

**ವಿಜಯ ಕರ್ನಾಟಕ**

ಮೇಲ್ವರ್ಗದ ಬಡವರಿಗೆ ಸಿಗದ ಪ್ರಮಾಣಪತ್ರ

**10% ಮೀಸಲು ಸೌಲಭ್ಯಕ್ಕೆ ರಾಜ್ಯ ಸರಕಾರದ ಕೊಕ್ಕೆ**

■ ಜಯಂತ್ ಗಂಗವಾಡಿ ಬೆಂಗಳೂರು



ಶೇ.10 ಮೀಸಲಾತಿ ಪಡೆಯಲು ರಾಜ್ಯಸರಕಾರ ಪ್ರಮಾಣಪತ್ರ ನೀಡದಿರುವುದರಿಂದ ಆಗುತ್ತಿರುವ ಸಮಸ್ಯೆಗಳ ಬಗ್ಗೆ ವಿಜಯ ಕರ್ನಾಟಕ ಪ್ರಕಟಿಸಿದ ವರದಿಗೆ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ.

### ಪ್ರಮಾಣಪತ್ರಗಳ ಲಭ್ಯತೆ ಎಲ್ಲಿ?

ರಾಜ್ಯದ ಎಲ್ಲಾ ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲೂ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೇಲ್ವರ್ಗದ ಅಭ್ಯರ್ಥಿಗಳಿಗೆ 'ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರ'ಗಳನ್ನು ವಿತರಣೆ ಮಾಡಲಾಗುತ್ತದೆ.

### ರಾಜ್ಯ ನೌಕರಿಗೆ ಅನ್ವಯಿಸದು

ಈ ಆದೇಶ ಕೇಂದ್ರದ ನಾಗರಿಕ ಹುದ್ದೆಗಳು, ಸೇವೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಮೀಸಲು ಸೌಲಭ್ಯ ಪಡೆಯಲು ಅನ್ವಯವಾಗಲಿದೆ. ಆದರೆ, ರಾಜ್ಯ ಸರಕಾರಿ ಹುದ್ದೆಗಳು, ಸೇವೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಸರಕಾರ ಪ್ರತ್ಯೇಕ ಆದೇಶ ಹೊರಡಿಸಬೇಕಿದೆ.

ಬಡವರಿಗೆ ಶೇ.10 ಮೀಸಲು ಸಂಪಾದಕೀಯ »10 | 144 ಜಾತಿಗಳ ಪಟ್ಟಿ »11 | ಮೀಸಲು ಕೋಟಾ: ಕೇಂದ್ರಕ್ಕೆ ನೋಟಿಸ್ »12